## ಮಕ್ಕಳ ಬಟ್ಟೆ ಕೊಳ್ಳುವಾಗ ಜಾಗ್ರತೆ

ಮಕ್ಕಳ ಚರ್ಮ ಸೂಕ್ಷ್ಮವಾಗಿರುವುದರಿಂದ ಅವರಿಗೆ ಕಿರಿಕಿರಿ ಆಗದಿರುವ ಉಡುಪುಗಳನ್ನೇ ಆಯ್ಕೆ ಮಾಡಿ. ಕೆಲ ಉಡುಪುಗಳು ಮೇಲ್ನೋಟಕ್ಕೆ ಮಿಂಚುತ್ತಿದ್ದರೂ ಒಳಗಡೆ ಹಾಕಿರುವ ಬಟ್ಟೆಯ ಗುಣಮಟ್ಟ ಕಳಪೆಯಾಗಿರಬಹುದು. ಕೊಳ್ಳುವಾಗ ಆ ಬಗ್ಗೆ ಗಮನವಿರಲಿ. ಆನ್‌ಲೈನ್ ಶಾಪಿಂಗ್ ಮಾಡುವಾಗ ಈ ಬಗ್ಗೆ ಹೆಚ್ಚು ಜಾಗ್ರತೆ ಅಗತ್ಯ.

ಮಕ್ಕಳಿಗೆ ಸರಿಹೊಂದುವ ಸೈಜ್ ಆಯ್ಕೆ ಇರಲಿ. ಮಕ್ಕಳು ಬೇಗ ಬೆಳೆಯುತ್ತಾರೆ ಎಂದು ಕೆಲವರು ಅತಿ ದೊಡ್ಡ ಸೈಜ್ ಕೊಳ್ಳುತ್ತಾರೆ. ಇನ್ನು ಕೆಲವರು ಈಗ ಸರಿ ಹೋದರೆ ಸಾಕು ಎಂದು ಚಿಕ್ಕ ಸೈಜ್ ಆಯ್ಕೆ ಮಾಡಿಕೊಳ್ಳುತ್ತಾರೆ. ಇವೆರಡೂ ಧೋರಣೆ ಮಗುವಿಗೆ ಕಿರಿಕಿರಿ ಆಗಬಹುದು. ಒಂದೊಂದು ಬ್ರಾಂಡ್‌ನ ಬಟ್ಟೆಗಳ ಅಳತೆ ಭಿನ್ನವಾಗಿರುತ್ತವೆ. ಹಾಗಾಗಿ ಮಗುವಿಗೆ ಸರಿಹೊಂದುವ ಆಯ್ಕೆ ನಿಮ್ಮದಾಗಿರಲಿ.



ಆದ್ಯಾ

ವೈವಿಧ್ಯಮಯ ವಿನ್ಯಾಸದ ಉಡುಪುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಟೀಶರ್ಟ್, ಪ್ಯಾಂಟ್ ಮೇಲೆ ಮಾತ್ರವೇ ಇರುತ್ತಿದ್ದ ಗೊಂಬೆ, ಪ್ರಾಣಿಗಳ ವಿನ್ಯಾಸ ಈಗ ಎಲ್ಲ ಬಗೆಯ ಉಡುಪುಗಳ ಮೇಲೂ ಒಡಮೂಡುತ್ತಿವೆ. ವೆಸ್ಟರ್ನ್ ಶೈಲಿಯ ಬಟ್ಟೆಗಳಲ್ಲದೇ ಸಾಂಪ್ರದಾಯಿಕ ಉಡುಪುಗಳ ಮೇಲೂ ಗೊಂಬೆ, ಪ್ರಾಣಿಗಳ ಚಿತ್ತಾರ ಮೂಡುತ್ತಿದೆ. ದಶಕಗಳ ಹಿಂದೆ 'ಛೋಟಾ ಭೀಮ್' ಚಿತ್ತಾರ ಮಕ್ಕಳ ಉಡುಪುಗಳ ಮೇಲೆ ಹೆಚ್ಚು ಕಾಣಿಸಿಕೊಳ್ಳುತ್ತಿತ್ತು. ಈಗ ವೈವಿಧ್ಯಮಯ ಕಾರ್ಟೂನ್ ಚಿತ್ರಗಳುಳ್ಳ ಬಟ್ಟೆಗಳು, ಗೊಂಬೆ ವಿನ್ಯಾಸದ ಉಡುಪುಗಳು ಮಕ್ಕಳನ್ನು ಆಕರ್ಷಿಸುತ್ತಿವೆ.

ಹಾಗೆಯೇ ಬಾರ್ಬಿ ಗರ್ಲ್, ಫ್ರೋಜನ್ ಎಲ್ಸಾ ವಿನ್ಯಾಸದ ಉಡುಪುಗಳು ಹೆಣ್ಣುಮಕ್ಕಳನ್ನು ಹೆಚ್ಚು ಸೆಳೆಯುತ್ತಿವೆ. ಹಬ್ಬದ ಈ ಸಮಯದಲ್ಲಿ ಇವುಗಳನ್ನು ಮಕ್ಕಳಿಗೆ ತೊಡಿಸಿ ಆನೆ, ಸಿಂಹ, ಹುಲಿ, ಕುದುರೆ, ಬೆಕ್ಕು, ನಾಯಿ, ಪಾಂಡಾ ಹೀಗೆ ಮಕ್ಕಳಿಗೆ ಇಷ್ಟವಾಗುವ ಪ್ರಾಣಿಗಳ ಚಿತ್ತಾರ ಮೂಡಿರುವ ಉಡುಪುಗಳು ಮಾರುಕಟ್ಟೆಯಲ್ಲಿ ಬೇಡಿಕೆ ಕುದುರಿಸಿವೆ. ಸಾಮಾನ್ಯವಾಗಿ ಮಕ್ಕಳಿಗೆ ಹೆಚ್ಚು ಇಷ್ಟವಾಗುವ ಪ್ರಾಣಿ ಆನೆ. ಅದರ ಸೊಂಡಿಲು, ಗಾತ್ರ, ಕಂಬದಂತಹ ಕಾಲುಗಳು ಮಕ್ಕಳಲ್ಲಿ ಬೆರಗು ಮೂಡಿಸುತ್ತವೆ. ಆ ಆನೆಯೇ ಅಂಗಿ ಮೇಲೆ ಮೂಡಿದಾಗ ಮಕ್ಕಳ ಖುಷಿ ದುಪ್ಪಟ್ಟಾಗುತ್ತದೆ. ಆನೆ ಸೊಂಡಿಲಿನ ವಿನ್ಯಾಸ ಮೂಡಿಸಿರುವ ಡಂಗ್ರಿ ಈಗಿನ ಟ್ರೆಂಡ್. ಆರು ತಿಂಗಳಿಂದ ಮೂರು ವರ್ಷದ ಒಳಗಿನ ಮಕ್ಕಳಿಗೆ ಇವು ಹೆಚ್ಚು ಹೊಂದುತ್ತವೆ.

## ಪ್ರಾಣಿ ವಿನ್ಯಾಸದ ಉಡುಪು

ಬೇಬಿ ಫೋಟೊಶೂಟ್ ಈಗಿನ ಟ್ರೆಂಡ್. ಮಗು ಹುಟ್ಟಿದಾಗಿನಿಂದ ಹಿಡಿದು ವರ್ಷದವರೆಗೂ ಪ್ರತಿ ತಿಂಗಳು ಮಗುವಿನ ಬೆಳವಣಿಗೆಯನ್ನು ಫೋಟೊಗಳಲ್ಲಿ ದಾಖಲಿಸುವುದು ಇಂದು ಬಹುತೇಕ ಪೋಷಕರ ಖಯಾಲಿಯಾಗಿದೆ. ಇದಕ್ಕಾಗಿ ಪ್ರತಿ ತಿಂಗಳೂ ಭಿನ್ನ ಪೋಷಾಕು ತೊಡಿಸುವ ಇರಾದೆ. ಇದಕ್ಕೆ ಇಂಬು ಕೊಡುವಂತೆ ಆನ್‌ಲೈನ್ ಶಾಪ್‌ಗಳಲ್ಲಿ ಪ್ರಾಣಿಗಳ ವಿನ್ಯಾಸದ ಡ್ರೆಸ್‌ಗಳು ಬರಸೆಳೆಯುತ್ತಿವೆ. ಇವುಗಳಲ್ಲಿ ಅಗ್ರಸ್ಥಾನ 'ಮೊಲ', 'ಪಾಂಡಾ' ವಿನ್ಯಾಸದ ಉಡುಪುಗಳು. ಮೊಲ, ಪಾಂಡಾ ಮುದ್ದಾಗಿ ಕಾಣುವ ಪ್ರಾಣಿಗಳು. ಅವುಗಳನ್ನು ನೋಡಿದರೆ ಎಂಥವರನ್ನೂ ಸೆಳೆಯುತ್ತವೆ. ಆ ಶೈಲಿಯ ಉಡುಗೆಗಳನ್ನು ಮಕ್ಕಳಿಗೆ ತೊಡಿಸಿ ಫೋಟೊಶೂಟ್ ಮಾಡಿಸಿ ಬೀಗುತ್ತಾರೆ ಪಾಲಕರು.

ಇನ್ನು ಮಕ್ಕಳು ಶಾಲೆಗೆ ಹೊರಟವೆಂದರೆ ಫ್ಯಾನ್ಸಿ ಡ್ರೆಸ್ ತೊಡಿಸಲು ಪ್ರಾಣಿಗಳ, ಗೊಂಬೆಗಳ ಉಡುಪುಗಳನ್ನು ಪೋಷಕರು ಆಯ್ಕೆ ಮಾಡಿಕೊಳ್ಳುತ್ತಾರೆ. ಚಿಟ್ಟೆ, ನವಿಲು, ಹುಲಿ, ಆನೆ, ಸಿಂಹ, ಕೋತಿ, ಮೊಲ, ಪಾಂಡಾ, ಟೆಡ್ಡಿ ಬೇರ್ ಹೀಗೆ ಹಲವು ಬಗೆಯ ಪ್ರಾಣಿ, ಪಕ್ಷಿಗಳ ಉಡುಪುಗಳೂ ಆನ್‌ಲೈನ್‌ನಲ್ಲಿ ಲಭ್ಯ.

'ದಶಕಗಳ ಹಿಂದೆ ಮಕ್ಕಳಿಗೆ ಫ್ಯಾನ್ಸಿ ಡ್ರೆಸ್ ಹಾಕಬೇಕೆಂದರೆ ಕಷ್ಟ ಎನಿಸುತ್ತಿತ್ತು. ಪ್ರಾಣಿಗಳ ಆಕೃತಿಯಲ್ಲಿ ಬಟ್ಟೆ ಹೊಲಿಸಿ ಹಾಕುವುದು ಪ್ರಯಾಸದ ಕೆಲಸವಾಗಿತ್ತು. ಆದರೂ ಸರಿಯಾದ ಶೇಪ್ ಇರುತ್ತಿರಲಿಲ್ಲ. ಆದರೆ ಈಗ ಹಾಗಿಲ್ಲ. ಬೆರಳ ತುದಿಯಲ್ಲೇ ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿ ಬೇಕೆಂದಾಗ ಬೇಕಾದ ವಿನ್ಯಾಸದ ಪ್ರಾಣಿ, ಕಾರ್ಟೂನ್, ಗೊಂಬೆಗಳ ಉಡುಪುಗಳನ್ನು ತರಿಸಬಹುದು' ಎನ್ನುತ್ತಾರೆ ಗೃಹಿಣಿ ಶಾಂತಲಾ.